**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

# ಸಿ.ಸಿ. ಸಂಖ್ಯೆ: 1081/2024

**ಸಾಕ್ಷಿಯನ್ನು ದಿಃ 23.03.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಗೋಪಾಲ | ಸಿಡಬ್ಲ್ಯೂಃ 9 | ಪಿಡಬ್ಲ್ಯೂಃ 7 |
| ತಂದೆಯ ಹೆಸರು | ಲೇಟ್ ವಿಷಕಂಠ ಶೆಟ್ಟಿ | | |
| ವಯಸ್ಸು | 63 ವರ್ಷ | | |
| ಕೆಲಸ | ನಿವೃತ್ತ ಪೋಲಿಸ್ | | |
| ವಾಸಸ್ಥಳ | ಹುಣಸೂರು ಪಟ್ಟಣ | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ಈ ಕೇಸಿನ ಚಾಸಾ-1 ನನ್ನ ಪತ್ನಿ. ದಿಃ 23.07.2024 ರಂದು ನನ್ನ ಪತ್ನಿ ಚಾಸಾ-1 ರವರು ಮೈಸೂರಿಗೆ ಹೋಗಿದ್ದರು. ದಿಃ 2407.2024ರಂದು ಚಾಸಾ-1 ರವರು ಮೈಸೂರಿನಿಂದ ವಾಪಸ್ಸು ಕೆ.ಎಸ್.ಆರ್.ಟಿ.ಸಿ. ಬಸ್ ನಲ್ಲಿ ಹುಣಸೂರಿಗೆ ಬರುತ್ತಿದ್ದರು. ದಿಃ 24.07.2024 ರಂದು ಬೆಳಿಗ್ಗೆ 10 ಗಂಟೆಗೆ ನಾನು ಮತ್ತು ನನ್ನ ಮಗನಾದ ಚಾಸಾ-8 ರವರು ಮನೆಯಲ್ಲಿದ್ದಾಗ ಚಾಸಾ-1 ರವರು ನನಗೆ ದೂರವಾಣಿ ಕರೆ ಮಾಡಿ, ಹುಣಸೂರು ಬಸ್ ನಿಲ್ದಾಣದಲ್ಲಿ ಬಸ್ ನಿಂದ ಇಳಿಯುವಾಗ ಬಿದ್ದು ತಲೆಯ ಹಿಂಭಾಗಕ್ಕೆ ಏಟಾಗಿದೆ ಎಂದು ಹೇಳಿದರು. ನನ್ನ ಪತ್ನಿ ಪ್ರಯಾಣಿಸುತ್ತಿದ್ದ ಬಸ್ಸಿನಲ್ಲಿದ್ದ ಅಂಗನವಾಡಿ ಶಿಕ್ಷಕಿ ತನ್ನನ್ನು ಹುಣಸೂರಿನ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದ್ದಾರೆ ಎಂದು ಚಾಸಾ-1 ನನಗೆ ಹೇಳಿದರು. ತಕ್ಷಣ ನಾನು ಮತ್ತು ಚಾಸಾ-8 ರವರು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಹೋದೆವು. ನಾವು ನೋಡಿದಾಗ ಚಾಸಾ-1ರವರ ತಲೆಗೆ ಏಟಾಗಿತ್ತು. ಅಪಘಾತ ಹೇಗಾಯಿತು ಎಂದು ನಾನು ಚಾಸಾ-1 ರವರನ್ನು ಕೇಳಿದಾಗ ತಾನು ಬೆಳಿಗ್ಗೆ 10.30 ಗಂಟೆಗೆ ಹುಣಸೂರು ಬಸ್ ನಿಲ್ದಾಣದಲ್ಲಿ ಬಸ್ ನಿಂತಾಗ ಕೆಳಗೆ ಇಳಿಯಲು ಹೋದಾಗ ಬಸ್ ಚಾಲಕ ಏಕಾ ಏಕಿ ಬಸ್ಸನ್ನು ಅತೀವೇಗವಾಗಿ ಚಲಾಯಿಸಿದ್ದರಿಂದ ತಾನು ಬಿದ್ದು ತನಗೆ ಏಟಾಯಿತು ಎಂದು ತಿಳಿಸಿದರು. ಬಸ್ ನಂಬರ್ ಕೇಳಲಾಗಿ KA-09-F-5319ರ ಕೆ.ಎಸ್.ಆರ್.ಟಿ.ಸಿ. ಬಸ್ ಆಗಿತ್ತು ಎಂದು ಚಾಸಾ-1 ರವರು ಹೇಳಿದರು. ಬಸ್ ಚಾಲಕನ

ಹೆಸರು ಸರಿಯಾಗಿ ನೆನಪಿಲ್ಲ. ಚಾಸಾ-1 ರವರನ್ನು ವೈದ್ಯರ ಸಲಹೆಯ ಮೇರೆಗೆ ಮೈಸೂರಿನ ಕಾಮಾಕ್ಷಿ ಆಸ್ಪತ್ರೆಗೆ ಸೇರಿಸಿದೆವು. ಅಪಘಾತವು ಬಸ್ ಚಾಲಕನ ತಪ್ಪಿನಿಂದ ಆಗಿದೆ. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. NN ವಕೀಲರಿಂದಃ**

ಆರೋಪಿ ಹಾಜರಿದ್ದು, ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.